**2ನೇ ಅಪರ ಸಿ.ಜೆ. ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಮದ್ದೂರು**

**ಸಿ.ಸಿ.ನಂ. 981/2017**

ಸಾಕ್ಷಿಯ ಹೆಸರು :- ಸುರೇಶ್ ಸಿ ಬಿ
ತಂದೆ/ಗಂಡನ ಹೆಸರು :- ಲೇಟ್ ಬಿಳಿಯ್ಯ
ವಯಸ್ಸು :- 55 ವರ್ಷ
ಉದ್ಯೋಗ :- ಅಡುಗೆ ಕೆಲ
ವಾಸಸ್ಥಳ :- ಚಾಮನಹಳ್ಳಿ

(ಸಾಕ್ಷಿಗೆ ದಿನಾಂಕ: **30.07.2022** ರಂದು ಪ್ರಮಾಣ ವಚನ ಬೋಧಿಸಲಾಯಿತು)

ಸಿಡಬ್ಲ್ಯೂ **1** ಪಿಡಬ್ಲ್ಯೂ **.1**

**ಮುಖ್ಯ ವಿಚಾರಣೆಃ- ಮಾನ್ಯ ಸಹಾಯ ಸರ್ಕಾರಿ ಅಭಿಯೋಜಕರವರಿಂದ**

ಆರೋಪಿ ನನಗೆ ಗೊತ್ತು. ಚಾಸಾ-2 ರಿಂದ 4 ನಮ್ಮ ಊರಿನವರು. ಚಾಸಾ--3 ರವರು ಈಗ ಪೌತಿಯಾಗಿರುತ್ತಾರೆ.

2. ಸುಮಾರು 5-6 ವರ್ಷಗಳ ಹಿಂದೆ ನನ್ನ ತಂದೆಯಾದ ಬಿಳಿಯಯ್ಯ ರವರಿಗೆ ಅಪಘಾತವಾಗಿರುತ್ತದೆ. ನನ್ನ ತಂದೆ ಬೆಳಿಗ್ಗೆ 06-00 ಗಂಟೆ ಸಮಯಕ್ಕೆ ಚಾಮನಹಳ್ಳಿ ಗ್ರಾಮದಲ್ಲಿ ಕಾಫಿ ಕುಡಿಯಲು ಹೋಟೆಲ್ ಹತ್ತಿರ ನಡೆದುಕೊಂಡು ಹೋಗುತ್ತಿದ್ದಾಗ, ಎದುರುಗಡೆಯಿಂದ ಸ್ಕೂಟರ್ ಬಂದು ನನ್ನ ತಂದೆಗೆ ಡಿಕ್ಕಿ ಮಾಡಿರುತ್ತಾರೆ. ನನ್ನ ತಂದೆಯನ್ನು ಚಾಸಾ--2 ಮತ್ತು 3 ರವರು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಆಗ ನಾವು ಬೆಂಗಳೂರಿನಲ್ಲಿದ್ದೇವು. ಚಾಸಾ--2 ಮತ್ತು 3 ರವರು ನನಗೆ ಕರೆ ಮಾಡಿ ತಿಳಿಸಿರುತ್ತಾರೆ. ಅಷರೊಳಗೆ ನನ್ನ ತಂದೆಯನ್ನು ಆಸ್ಪತ್ರೆಗೆ ದಾಖಲು ಮಾಡಿದ್ದರು. ನಂತರ ನನ್ನ ತಂದೆಯನ್ನು ಮಂಡ್ಯ ಆಸ್ಪತ್ರೆಯಲ್ಲಿ ಒಂದು ವಾರಗಳ ಒಳರೋಗಿಯಾಗಿ ದಾಖಲು ಮಾಡಿದ್ದೇವು. ನಂತರ ಆಸ್ಪತ್ರೆಯಲ್ಲಿ ನನ್ನ ತಂದೆ ತೀರಿಹೋಗಿರುತ್ತಾರೆ. ನಾನು ಈಗ ಒಂದು ದಾಖಲೆಯನ್ನು ನೋಡುತ್ತಿದ್ದೇನೆ, ಅದರಲ್ಲಿ ನನ್ನ ಸಹಿಯಿರುತ್ತದೆ. ಸದರಿ ದಾಖಲೆ ದೂರು ಆಗಿದ್ದು ಅದನ್ನು ನಿಪಿ-1 ಎಂದು, ಸಾಕ್ಷಿ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನಾನು ಈಗ ಮತ್ತೊಂದು ದಾಖಲೆಯನ್ನು ನೋಡುತ್ತಿದ್ದೇನೆ, ಅದರಲ್ಲಿ ನನ್ನ ಸಹಿಯಿರುತ್ತದೆ. ಸದರಿ ದಾಖಲೆ ಮುಂದುವರೆದ ದೂರು ಆಗಿದ್ದು ಅದನ್ನು ನಿಪಿ-2 ಎಂದು, ಸಾಕ್ಷಿ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯವಿಚಾರಣೆಗೆ ಸಮಯಾವಕಾಶ ಕೋರಿದ್ದು ನೀಡಲಾಯಿತು.

**(**ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.**)**

ಓದಿ ಹೇಳಿ ಕೇಳಿ ಸರಿ ಇದೆ

**(ಕಿರಣ್ ಎಸ್. ಪಿ.)**
**2ನೇ ಅಪರ ಸಿವಿಲ್ ಮತ್ತು ಜೆ.ಎಂ.ಎಂ.ಎಫ್.ಸಿ ನ್ಯಾಯಾಧೀಶರು**
**ಮದ್ದೂರು.**